**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂ.ಬೆಸವಿ/ಜಿಲ್ಲಾ-ಜ.ಕೃ.ನಿ.ಪತ್ರ-13/2022-23

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 28-06-2022.

**ಸುತ್ತೋಲೆ-1**

ವಿಷಯ: 2022-23ನೇ ಸಾಲಿನ ಪೂರ್ವ ಮುಂಗಾರು ಸೇರಿದಂತೆ ವಿವಿಧ ಹಂಗಾಮಿನ ಬೆಳೆ ಸಮೀಕ್ಷೆ ಯೋಜನೆಯ ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಹಾಗೂ ಹೆಚ್ಚಿನ ಪ್ರಚಾರ ನೀಡುವ ಕುರಿತು.

ಉಲ್ಲೇಖ: ದಿನಾಂಕ: 27.06.2022 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿಗೆ ಈಗಾಗಲೇ ರೈತರ ಮೊಬೈಲ್ ಆಪ್ ಅನ್ನು ಬಿಡುಗಡೆಗೊಳಿಸಿ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ದಿನಾಂಕ 27.06.2022 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ಕಡಿಮೆ ಪ್ರಗತಿ ಸಾಧಿಸಿರುವುದಕ್ಕೆ ಸಭೆಯಲ್ಲಿ ವಿವರಣೆಗಳನ್ನು ಪಡೆದು ಮುಂದಿನ ದಿನಗಳಲ್ಲಿ ಪೂರ್ವ ಮುಂಗಾರು ಸೇರಿದಂತೆ ಎಲ್ಲಾ ಹಂಗಾಮಿನಲ್ಲಿ ಬೆಳೆ ಸಮೀಕ್ಷೆಯ ಗರಿಷ್ಠ ಪ್ರಗತಿಯನ್ನು ರೈತರಿಂದಲೇ ಸಕಾಲದಲ್ಲಿ ಸಾಧಿಸಲು ಸೂಚಿಸಿರುತ್ತಾರೆ.

ಪ್ರಸ್ತುತ ಹಂಗಾಮಿನಲ್ಲಿ ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಸಾಧಿಸಿರುವ ಪ್ರಗತಿಯು ಕಡಿಮೆ ಇರುವ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಕೃಷಿ ಸಚಿವರು ಸೂಚಿರುವಂತೆ ಮತ್ತು ಇಲಾಖೆಯ ವಿವಿದ ಪ್ರಗತಿ ಪರಿಶೀಲನಾ ಸಭೆಗಳ ಮೂಲಕ ತಿಳಿಸಿರುವಂತೆ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳುವುದು.

1. ರೈತರು ತಮ್ಮ ಕ್ಷೇತ್ರಗಳಲ್ಲಿ ಬೆಳೆದಿರುವ ಬೆಳೆಗಳ ವಿವರಗಳನ್ನು ರೈತರೇ ಸ್ವತಃ, ರೈತ ಬೆಳೆ ಸಮೀಕ್ಷೆ ಮೊಬೈಲ್ ಆಪ್ ಮೂಲಕ ನಮೂದಿಸಲು ಹೆಚ್ಚಿನ ಅರಿವನ್ನು ಮೂಡಿಸುವ ಸಲುವಾಗಿ ಜಿಲ್ಲಾ /ತಾಲ್ಲೂಕು/ಹೋಬಳಿ/ ಗ್ರಾಮ ಮಟ್ಟದಲ್ಲಿ ನಿರಂತರವಾಗಿ ಪ್ರಚಾರ ಸಭೆಗಳನ್ನು ನಡೆಸುವುದು.
2. ಪ್ರಚಾರಕ್ಕೆ ಸಂಬಂಧಪಟ್ಟಂತೆ ಕರಪತ್ರಗಳು, ಪೋಸ್ಟರ್ ಗಳು ಮತ್ತು ಬ್ಯಾನರ್ ಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮುದ್ರಿಸಿ ರೈತ ಸಂಪರ್ಕ ಕೇಂದ್ರ, ಹಾಲು ಉತ್ಪಾದಕ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಗ್ರಾಮ ಪಂಚಾಯತಿ, ನಾಡಕಚೇರಿ ಮತ್ತು ಹೆಚ್ಚಿನ ಜನಸಂದಣಿ ಇರುವ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು.
3. ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಕಾಲ ಕಾಲಕ್ಕೆ ಪ್ರಚಾರ ನೀಡುವುದು.
4. 2022-23ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯಿಂದ ವಿನಾಯಿತಿ ಪಡೆದಿರುವ ಜಿಲ್ಲೆಗಳು, ಈ ಕುರಿತು ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.
5. **ರೈತರ ಬೆಳೆ ಸಮೀಕ್ಷೆ ಆಪ್ ಮೂಲಕವೇ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದು.**
6. 2022-23ನೇ ಸಾಲಿನ ಬೆಳೆ ಸಮೀಕ್ಷೆ ಆಪ್ ನಲ್ಲಿ **"harvest over / ಕಟಾವಾದ ಬೆಳೆ"** ಅಡಿ ಯಾವುದೇ ದಾಖಲೆಗಳು ಬಾರದಂತೆ ಅಥವಾ ಅಲ್ಪ ಪ್ರಮಾಣದಲ್ಲಿರುವಂತೆ ಎಚ್ಚರಿಕೆ ವಹಿಸುವುದು.

7. 2022-23ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯನ್ನು ಖಾಸಗಿ ನಿವಾಸಿಗಳ ಮೊಬೈಲ್ ಆಪ್ ಅನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದರಿಂದ, ಕೂಡಲೇ ಕೃಷಿಯೇತರ ತಾಕುಗಳ marking and unmarking ಚಟುವಟಿಕೆಯನ್ನು ಪೂರ್ಣಗೊಳಿಸಿ ಅಂತಿಮಗೊಳಿಸುವುದು.
8. 2019-20ನೇ ಸಾಲಿನಿಂದ ಪ್ರಸ್ತುತ ಸಾಲಿನವರೆಗೆ ವಿವಿಧ ಹಂಗಾಮುವಾರು **Aadhaar ಸೀಡ್** ಆಗದೇ ಮತ್ತು **NPCI status** ಸಕ್ರಿಯವಾಗಿಲ್ಲದೇ ಖಾಸಗಿ ನಿವಾಸಿಗಳ ಗೌರವಧನ ಪಾವತಿಗೆ ಬಾಕಿಯಿರುವ ಪ್ರಕರಣಗಳನ್ನು ಕೂಡಲೇ ತಮ್ಮ ಹಂತದಲ್ಲಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದು.
9. ಬೆಳೆ ಸಮೀಕ್ಷೆಯ ವಿವಿಧ ಘಟಕಗಳಡಿ ಬಿಡುಗಡೆಯಾಗುವ ಅನುದಾನವನ್ನು ಸಂದರ್ಭಾನುಸಾರ ವೆಚ್ಚಭರಿಸುವುದು ಹಾಗೂ ಹಿಂದಿನ ಸಾಲುಗಳ ಉಪಯೋಗಿತ ಪತ್ರಗಳನ್ನು ಸಲ್ಲಿಸಲು ಬಾಕಿಯಿದ್ದಲ್ಲಿ ಕೂಡಲೇ ಸಲ್ಲಿಸುವುದು.
10. ಬೆಳೆ ಸಮೀಕ್ಷೆಯಡಿ ಕೈಗೊಳ್ಳುವ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದಂತೆ video documentation clips, ಛಾಯಾಚಿತ್ರಗಳನ್ನು ಮತ್ತು ಇತ್ಯಾದಿಗಳನ್ನು ಈ ಕಚೇರಿಗೆ ಸಲ್ಲಿಸುವುದು.

28/6/22

ಕೃಷಿ ಆಯುಕ್ತರು

ಪ್ರತಿಯನ್ನು:

1.ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.

2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.

3. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ವಿಭಾಗ, ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ತಲುಪಿಸುವಂತೆ ಸೂಚಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

## District wise Farmers Crop Survey Status Report
## Date: 27.06.2022@11.00AM

| Sl. No. | District | Total No of Actual Plots to be Surveyed | Total no of plots uploaded by Farmer | Percentage |
|---|---|---|---|---|
| 1 | 2 | 3 | 4 | 5 |
| 1 | Mysuru | 1045911 | 25693 | 2.46 |
| 2 | Gadag | 315897 | 7536 | 2.39 |
| 3 | Dharwad | 328241 | 5589 | 1.70 |
| 4 | Hasan | 1537610 | 5580 | 0.36 |
| 5 | Haveri | 492677 | 3198 | 0.65 |
| 6 | ChamarajNagar | 430333 | 2139 | 0.50 |
| 7 | Koppal | 429680 | 1886 | 0.44 |
| 8 | Mandya | 1695512 | 1562 | 0.09 |
| 9 | DakshinaKannada | 916929 | 1528 | 0.17 |
| 10 | Belagavi | 1526651 | 1501 | 0.10 |
| 11 | Bagalkot | 514049 | 1144 | 0.22 |
| 12 | Tumakuru | 1730071 | 1062 | 0.06 |
| 13 | Chikkamagaluru | 580892 | 926 | 0.16 |
| 14 | Chitradurga | 610522 | 847 | 0.14 |
| 15 | Ramanagara | 689383 | 234 | 0.03 |
| 16 | Raichur | 651597 | 225 | 0.03 |
| 17 | Udupi | 954197 | 197 | 0.02 |
| 18 | Chikkaballapur | 651134 | 182 | 0.03 |
| 19 | Vijayapura | 614832 | 142 | 0.02 |
| 20 | VIJAYANAGARA | 428097 | 133 | 0.03 |
| 21 | Davangere | 472651 | 128 | 0.03 |
| 22 | Kolar | 784370 | 87 | 0.01 |
| 23 | Ballari | 376684 | 61 | 0.02 |
| 24 | Shivamogga | 499500 | 47 | 0.01 |
| 25 | Kodagu | 260610 | 39 | 0.01 |
| 26 | Bengaluru Rural | 437568 | 21 | 0.00 |
| 27 | UttarKannada | 584369 | 8 | 0.00 |
| 28 | Kalaburgi | 703208 | 7 | 0.00 |
| 29 | Bengaluru Urban | 277970 | 5 | 0.00 |
| 30 | YADGIRI | 426253 | 5 | 0.00 |
| 31 | Bidar | 472915 | 3 | 0.00 |
| **Total** | | **21440313** | **61715** | **0.29** |